# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಶಾಂತಿಬಾಯಿ ಗಂಡ ಲೇಟ್ ಹಸ್ತಿಮಲ್ ಜೈನ್,<br>ಕೊಟ್ಟೂರು ರಸ್ತೆ, ಹರಪನಹಳ್ಳಿ, ದಾವಣಗೇರೆ ಜಿ. | 1. ಸೋಮಲಿಂಗಪ್ಪ,<br>2. ಎ.ದೇವೇಂದ್ರಪ್ಪ,<br>3. ಬಿ.ಆರ್.ಮಲ್ಲಿಕಾರ್ಜುನ,<br>ಹರವಿ ಗ್ರಾಮ, ಹಡಗಲಿ ತಾ.<br>{ಶ್ರೀ ಎಸ್.ಶ್ರೀಪ್ರಕಾಶ್, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹರವಿ | 89/ಎ | 4-45 | ಖುಷ್ಕಿ |

*****

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹರಿವಿ ಗ್ರಾಮದ ಸ.ನಂ.89/ಎ ವಿ:4-45 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಹರಪನಹಳ್ಳಿ ನಿವಾಸಿಯಾದ ಶ್ರೀಮತಿ ಶಾಂತಿಬಾಯಿ ಗಂಡ ಲೇಟ್ ಹಸ್ತಿಮಲ್ ಜೈನ್ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿನಾಂಕ 03-12-2014 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 09-12-2014 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:01-01-2015 ರಂದು ಹರವಿ ಗ್ರಾಮದ ನಿವಾಸಿಯಾದ ಸೋಮಲಿಂಗಪ್ಪ, ಎ.ದೇದೆಂದ್ರಪ್ಪ, ಬಿ.ಆರ್.ಮಲ್ಲಿಕಾರ್ಜುನ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್. ನಂ.09/2014-15 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿನಾಂಕ 23-04-2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕಳಣದ ವಿಚಾರಣೆಗೆ ಅರ್ಜಿದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಗೂ ಅವರ ಪರ ವಕೀಲರು ಹಾಜರಾಗಿದ್ದು, ವಿಚಾರಣೆ ವೇಳೆಯಲ್ಲಿ ತಕರಾರುದಾರರು ತಾವು ಈ ಜಮೀನುಗಳನ್ನು ತಮ್ಮ ಅಜ್ಜನ ಕಾಲದಿಂದಲೂ ಸಾಗುವಳಿ ಮಾಡುತ್ತಿದ್ದು, ನಮ್ಮ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಅರ್ಜಿದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರವುದಿಲ್ಲ ಹಾಗೂ ಯಾವುದೇ ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ತಕರಾರುದಾರರು ಅಥವಾ ಅವರ ಪರ ವಕೀಲರು ಯಾವುದೇ ಲಿಖಿತ ಹೇಳಿಕೆಗಳನ್ನಾಗಲೀ ಅಥವಾ ಯಾವುದೇ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆಗಳು ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಹಾಲಿ ಪಹಣಿಯು ಹಸ್ತಿಮಲ್ ತಂದೆ ಶೇಷಾಜಿ ಮಹರವಾಡಿ ಹರಪನಹ ಇವರ ಹೆಸರಿಗೆ ಇದ್ದು, ಕಾರ್ಯಾಲಯದಲ್ಲಿ ಲಭ್ಯವಿರುವ ಕೈ ಬರಹ ಪಹಣಿಯನ್ನು ಪರಿಶೀಲಿಸಲಾಗಿ, 1968-69 ರಿಂದಲೇ ಕಾಲಂ ನಂ.9 ರಲ್ಲಿ ಹಸ್ತಮಲ್ ತಂದೆ ಶೇಷಾಜಿ ಮೆಹರವಾಡೆ ಹರಪನಹಳ್ಳಿ ಹರವಿ ಎಂದು ಹಾಗೂ ಕಾಲಂ ನಂ.10ರಲ್ಲಿ ಕ್ರಯಪತ್ರ ಪ್ರಕಾರ ಎಂದು ಇರುತ್ತದೆ. ಅಂದಿನಿಂದ ಈವರೆಗೂ ಯಾವುದೇ ಹಕ್ಕು ಬದಲಾವಣೆ ಆಗಿರುವುದಿಲ್ಲ. ತಕರಾರುದಾರರು ಸದರಿ ಜಮೀನನ್ನು ಖರೀದಿಸಿದ ಬಗ್ಗೆಯಾಗಲೀ ಅಥವಾ ಇನ್ನಾವುದೇ ಮೂಲದಿಂದಾಗಲಿ ಪಟ್ಟಾದಾರರಿಂದ ಪಡೆದ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ತಕರಾರುದಾರರು ತಮ್ಮ ತಾತನ ಕಾಲದಿಂದ ಸಾಗುವಳಿ ಮಾಡುತ್ತಾ ಬಂದಿರುವುದಾಗಿ ಮಾತ್ರ ತಿಳಿಸಿರುತ್ತಾರೆ. ಅಧಿಕೃತವಾಗಿ ಯಾವುದೇ ರೀತಿಯಿಂದಲೂ ಹಕ್ಕು ಅಥವಾ ಸ್ವಾಧೀನತೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಅರ್ಜಿದಾರರು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ವಂಶವೃಕ್ಷ ಪ್ರತಿ ಪ್ರಕಾರ ಅರ್ಜಿದಾರರು ಹಸ್ತಿಮಲ್ ಜೈನ್ ರವರ ಪತ್ನಿಯಾಗಿರುತ್ತಾರೆ. ಷಾ.ಹಸ್ತಿಮಲ್ ಜೈನ್ ತಂದೆ ಷಾ.ಶೇಷಾಜೀ ಜೈನ್ ರವರು ದಿ:08-10-2015 ರಂದು ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿರುತ್ತಾರೆ. ನೋಂದಾಯಿತ ಡಾಕುಮೆಂಟ್ ನಂ.30/1968 ದಿ:02-04-1968 ರಂದು ಹರಪನಹಳ್ಳಿಯ ಹಸ್ತಿಮಲ್ ತಂದೆ ಷಾ.ಸೇಷಾ ರವರು ರೂ.800/-ಕ್ಕೆ ಹರ್ವಿ ಗ್ರಾಮದ ಪಾಟೀಲ್ ನಾಗನಗೌಡ ರವರ ಮಕ್ಕಳಾದ ಚನ್ನಬಸವನಗೌಡ, ಜಂಬುನಾಥ ಗೌಡ, ಮತ್ತು ಬಸವನಗೌಡನ ಮಗನಾದ ರುದ್ರೌಡನ ಹೆಂಡತಿ ಬಸವ್ವ ಇವರಿಂದ ಖರೀದಿಸಿದ ಬಗ್ಗೆ ನೋಂದಾಯಿತ ಕ್ರಯಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ. ಮೇಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಜಿದಾರರೇ ಕಾನೂನುಬದ್ದ ವಾರಸುದಾರರಾಗಿರುತ್ತಾರೆ. ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸುವ ಯಾವುದೇ

ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸುವ ಅವಶ್ಯಕತೆ ಇರುತ್ತದೆ. ಕಡತದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಅರ್ಜಿದಾರರೇ ವಾರಸುದಾರರಿವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/37/2014–15 ದಿನಾಂಕ:23–05–2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.15/2013–14 ರ ಪ್ರಕರಣದಲ್ಲಿ ಪೋತಿ ವಾರಸಾ ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಆದೇಶದಿಂದ ಬಾದೆಯುಂಟಾದಲ್ಲಿ ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಂಡು ಸೂಕ್ತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.